ವಾಸಿಸುತ್ತಿರುವವರ ಸ್ಥಳದ ಹಕ್ಕು ಪತ್ರ ಈವರೆಗೂ ದೊರಕದೆ ಅರಣ್ಯ ಇಲಾಖೆಯ ದಾಖಲೆಯಲ್ಲೇ ಇರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಈ ಸ್ಥಳದ ಹಕ್ಕು ಪತ್ರ ದೊರೆಯದ ಕಾರಣ ಈ ಸ್ಥಳದ ನಿವಾಸಿಗರು ಯಾವುದೇ ಸರ್ಕಾರಿ ಸೌಲತ್ತು ದೊರಕದೆ ವಂಚಿತರಾಗುತ್ತಿರುವುದು ಸರ್ಕಾರ ಗಮನಿಸಿದೆಯೇ;

ಇ) ಗಮನಿಸಿದ್ದರೆ, ಈ ಜನತಾ ಪ್ಲಾಟ್ ನಿವಾಸಿಗರ ಸ್ಥಳದ ಹಕ್ಕು ಪತ್ರ ಸರಿಪಡಿಸಿಕೊಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು):

ಅ) ಹೌದು. ಕಂದಾಯ ಇಲಾಖೆಯಿಂದ ಹಂಚಿಕೆಯಾದ ಕುಮಟಾ ತಾಲ್ಲೂಕಿನ ಗ್ರಾಮೀಣ ಭಾಗದ ಗ್ರಾಮ ಪಂಚಾಯತ್‌ಗಳಾದ ಕೋಡಕಣಿ, ವಾಲಗಳ್ಳಿ, ಮೂರೂರ, ಗೋಕರ್ಣ, ಹಿರೇಗುತ್ತಿ, ಹೊನಲಗದ್ದೆ ಹಾಗೂ ಹೊನ್ನಾವರ ತಾಲ್ಲೂಕಿನ ಗ್ರಾಮೀಣ ಭಾಗವಾದ ಹೊಸಾಕುಳಿ, ಹೆರಂಗಡಿ ಗ್ರಾಮ ಪಂಚಾಯತ್‌ದ ಮೂಡಕಣಿ, ಇವುಗಳಲ್ಲಿ ಜನತಾ ಪ್ಲಾಟ್‌ಗಳಲ್ಲಿ ವಾಸಿಸುತ್ತಿರುವವರ ಸ್ಥಳದ ಹಕ್ಕು ಪತ್ರಗಳು ಈ ವರೆಗೂ ದೊರಕದೆ ಅರಣ್ಯ ಇಲಾಖೆಯ ದಾಖಲೆಯಲ್ಲೇ ಇರುವುದು ಸರ್ಕಾರದ ಗಮನದಲ್ಲಿ ಇರುತ್ತದೆ.

ಆ) ಹೌದು. ಹಕ್ಕು ಪತ್ರ ನೀಡಿದ ಸರ್ವೆ ನಂಬರ್ ಜಮೀನು ಅರಣ್ಯ ಇಲಾಖೆಯ ಜಮೀನಾದ್ದರಿಂದ ಕಂದಾಯ ಇಲಾಖೆಯಲ್ಲಿ ದಾಖಲು ಮಾಡಲು ಅವಕಾಶವಿರುವುದಿಲ್ಲ.

ಇ) ಹಕ್ಕು ಪತ್ರ ನೀಡಿದ ಜಮೀನು ಅರಣ್ಯ ಇಲಾಖೆಯ ಜಮೀನಾಗಿರುವುದರಿಂದ ಅದನ್ನು ಡಿ ಫಾರೆಸ್ಟ್ ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ (ಅರಣ್ಯ ಇಲಾಖೆಯಲ್ಲಿ).

844 (1030) ಶ್ರೀ ಮೋಹನ್ ಕೃಷ್ಣಶೆಟ್ಟಿ (ಕುಮಟಾ): ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಮಟಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಮಟಾ ತಾಲ್ಲೂಕು ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿರುವ ರೈತರ ಸಾವಿರಾರು ಎಕರೆ ಕೃಷಿ ಭೂಮಿಗೆ ಉಪ್ಪುನೀರು ನುಗ್ಗುತ್ತಿದ್ದು ಅಪಾರ ನಷ್ಟವುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಉಪ್ಪು ನೀರು ನಿಯಂತ್ರಿಸಲು ತಡಗೋಡೆ ನಿರ್ಮಿಸುವ ಬಗ್ಗೆ ಸರ್ಕಾರ ಮನಗಂಡಿದೆಯೇ;

ಇ) ಮನಗಂಡಿದ್ದರೆ, ಯಾವಾಗ ತಡೆಗೋಡೆ ನಿರ್ಮಿಸಲಾಗುವುದು?

ಶ್ರೀ ಬಿ. ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):

ಅ) ಬಂದಿದೆ

ಆ) ಮತ್ತು ಇ) ಹೌದು. ಉಪ್ಪುನೀರು ನಿಯಂತ್ರಿಸಲು ಕುಮಟಾ ತಾಲ್ಲೂಕಿನಲ್ಲಿ 15 ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ 7 ಉಪ್ಪುನೀರು ತಡೆಗೋಡೆಗಳನ್ನು ನಿರ್ಮಿಸಲಾಗಿದೆ. ಸದರಿ ಯೋಜನೆಗಳಿಂದ ಕ್ರಮವಾಗಿ 3131 ಹೆಕ್ಟೇರ್ ಹಾಗೂ 952 ಹೆಕ್ಟೇರ್ ಭೂಮಿ ಉಪ್ಪುನೀರು ನುಗ್ಗುವಿಕೆಯಿಂದ ಸಂರಕ್ಷಣೆಯಾಗುತ್ತಿದೆ.

ಇದಲ್ಲದೆ, ಅನುದಾನದ ಲಭ್ಯತೆಯ ಮೇರೆಗೆ ಅಗತ್ಯವಿರುವ ಕಡೆ ಉಪ್ಪುನೀರು ತಡೆಗೋಡೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

845 (1190) ಶ್ರೀ ಮುನಿಯಪ್ಪ ಎಸ್.ಎಂ. (ಚಿಕ್ಕಬಳ್ಳಾಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂಸೇನಾ ನಿಗಮದಿಂದ ವಿದ್ಯಾರ್ಥಿ ನಿಲಯಗಳು ಸಮುದಾಯ ಭವನಗಳು ಹಾಗೂ ಇತರೇ ಕಟ್ಟಡ ಕಾಮಗಾರಿಗಳು ಬೇರೆ ಇಲಾಖೆಗಳಿಂದ ಕೈಗೊಂಡಿರುವ ಕಾಮಗಾರಿಗಳು ತ್ವರಿತವಾಗಿ ನಡೆಯುತ್ತಿರುವಂತೆ ಭೂಸೇನಾ ನಿಗಮದಿಂದ ನಡೆಯುತ್ತಿರುವ ಕಾಮಗಾರಿಗಳು ನಿಧಾನಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಇಲಾಖೆಯ ಕಾಮಗಾರಿಗಳು ತ್ವರಿತ ಗತಿಯಲ್ಲಿ ನಡೆಯುವಂತೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಬಂದಿದೆ.

ಆ) ಸಿಮೆಂಟ್ ಕೃತಕ ಅಭಾವ ಹಾಗೂ ಕಾಮಗಾರಿ ವಹಿಸಿದ ಇಲಾಖೆಗಳಿಂದ ಅನುದಾನ ಬಿಡುಗಡೆಯಾಗದ ಅಥವಾ ಪ್ರಗತಿ ಹಂತವಾರು ಅನುದಾನ ಬಿಡುಗಡೆಯಾಗುತ್ತಿರುವ ಹಿನ್ನೆಲೆಯಲ್ಲಿ, ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಅನುದಾನ ಬಿಡುಗಡೆಯಾದಂತೆ ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.